# ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ. ಶ್ರೀರಾಂಪುರ. ಹೊಸದುರ್ಗ ತಾ. ಚಿತ್ರದುರ್ಗ.ಜಿ.

## ಒಂದನೇ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ –2019.

**ದಿನಾಂಕ : / 09/2019** **9 ನೇ ತರಗತಿ** **ಒಟ್ಟು ಅಂಕ: 90.**

**ಸಮಯ: 3 ಗಂಟೆಗಳು.** **ವಿಷಯ:– ಗಣಿತ** **ವಿದ್ಯಾರ್ಥಿಯ ಹೆಸರು:.......................................**

**I ಬಹುಆಯ್ಕೆ ಪ್ರಶ್ನೆಗಳಿಗೆ , ಸೂಕ್ತವಾದ ಉತ್ತರವನ್ನು ಅಯ್ಕೆ ಮಾಡಿ ಬರೆಯಿರಿ.** **1 x 9 = 9**

**(1)** ಭಾಗಲಬ್ಧ ಸಂಖ್ಯೆ $\frac{135}{81}$ ರ ಸಂಕ್ಷಿಪ್ತ ರೂಪ.

(a) $\frac{5}{3}$ (b) $\frac{15}{9}$ (c) $\frac{3}{5}$ (d) $\frac{45}{27}$

**(2)** ಈ ಕೆಳಗಿನವುಗಳಲ್ಲಿ ಯಾವುದು ಭಾಗಲಬ್ಧ ಸಂಖ್ಯೆ ?

(a) $1+\sqrt{3}$ (b) $\pi$ (c) $2\sqrt{3}$ (d) 0

**(3)** $5x^3+4x^2+7x$ ಈ ಬಹುಪದೋಕ್ತಿಯ ಡಿಗ್ರಿ ( ಮಹತ್ತಮ ಘಾತ ) ಯು,

(a) 1 (b) 2 (c) 3 (d) 4

**(4)** $(x+3)^3$ ನ ವಿಸ್ತಾರ ರೂಪದಲ್ಲಿ **x** ನ ಸಹಾಪವರ್ತನ.

(a) 1 (b) 9 (c) 18 (d) 27

**(5)** $64^{1/2}$ ರ ಬೆಲೆಯು

(a) 8 (b) 16 (c) 6 (d) 12

**(6)** ಈ ಕೆಳಗಿನವುಗಳಲ್ಲಿ ಯಾವುದು ಬಹುಪದೋಕ್ತಿ ಅಲ್ಲ

(a) $4x^2-3x+7$ (b) $x^3+3x^2+1$ (c) $y^2+\sqrt{2}$ (d) $y+\frac{2}{y}$

**(7)** ಒಂದು ಬಿಂದುವಿನ ಮೂಲಕ ಹಾದು ಹೋಗುವ ಸರಳ ರೇಖೆಗಳ ಸಂಖ್ಯೆ.

(a) ಎರಡು (b) ಒಂದು (c) ಯಾವುದೂ ಇಲ್ಲ (d) ಅನಂತ

**(8)** ಎರಡು ಸರಳ ರೇಖೆಗಳು ಪರಸ್ಪರ ಛೇದಿಸಿದಾಗ ಉಂಟಾಗುವ ಶೃಂಗಾಭಿಮುಖ ಕೋನಗಳು,.......................ಆಗಿರುತ್ತವೆ.

(a) ಸರಳಕೋನ (b) ಲಂಬಕೋನ (c) ಅಸಮ (d) ಸಮ

**(9)** ಈ ಕೆಳಗಿನವುಗಳಲ್ಲಿ ಯಾವುದು ತ್ರಿಭುಜಗಳ ಸರ್ವಸಮತೆಗೆ ಸಂಬಂಧಿಸಿದಂತೆ ನಿಯಮ ಆಗಿರುವುದಿಲ್ಲ.

(a) ಬಾ.ಕೋ.ಬಾ (b) ಕೋ.ಬಾ.ಕೋ (c) ಬಾ.ಬಾ.ಕೋ (d) ಬಾ.ಬಾ.ಬಾ

**II. ಬಿಟ್ಟ ಸ್ಥಳವನ್ನು ಸೂಕ್ತವಾದ ಉತ್ತರದಿಂದ ತುಂಬಿರಿ.** **1 x 6 =6**

**(10)** ಡಿಗ್ರಿ 35 ಆಗಿರುವ ಒಂದು ದ್ವಿಪದೋಕ್ತಿಗೆ ಉದಾಹರಣೆ ಕೊಡಿ.?

**(11)** ಚತುರ್ಭುಜದ ವಿಧಗಳನ್ನು ಬರೆಯಿರಿ.

**(12)** ರೇಖಾಗಣಿತದ ಜನಕ ಯಾರು ?

**(13)** ಆಧಾರಪ್ರತಿಜ್ಞೆಗಳು ಎಂದರೇನು.?




**(14)** ಚಿತ್ರದಲ್ಲಿ **x** ಮತ್ತು **y** ಗಳ ಬೆಲೆ ಕಂಡುಹಿಡಿಯಿರಿ.

**(15)** ಕೋ ಬಾ ಕೋ ಸರ್ವಸಮತೆಯ ನಿಯಮವನ್ನು ನಿರೂಪಿಸಿ.?

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2 x 19 =38**

**(16)** 3 ಮತ್ತು 4 ರ ನಡುವಿನ ಆರು ಭಾಗಲಬ್ಧ ಸಂಖ್ಯೆಗಳನ್ನು ಕಂಡುಹಿಡಿಯಿರಿ.?

**(17)** ಈ ಕೆಳಗಿನ ಉಕ್ತಿಯನ್ನು ಸಂಕ್ಷೇಪಿಸಿ : $(3+\sqrt{3})(3-\sqrt{3})$.

**(18)** $\frac{1}{7} = 0.\overline{142857}$ ಆದರೆ (a) $\frac{2}{7}$ (b) $\frac{3}{7}$ ರ ದಶಮಾಂಶ ವಿಸ್ತರಣೆಗಳನ್ನು ದೀರ್ಘಭಾಗಾಕಾರ ಮಾಡದೇ ಕಂಡುಹಿಡಿಯಿರಿ.?

(19) $x = 2$ ಆಗಿದ್ದಾಗ ಬಹುಪದೋಕ್ತಿ $5x - 4x^2 + 3$ ರ ಬೆಲೆ ಕಂಡುಹಿಡಿಯಿರಿ.?

(20) $x^3 + 3x^2 + 3x + 1$ ನ್ನು $(x + 1)$ ರಿಂದ ಭಾಗಿಸಿದಾಗ ಸಿಗುವ ಶೇಷವನ್ನು ಶೇಷ ಪ್ರಮೇಯ ಉಪಯೋಗಿಸಿ ಕಂಡುಹಿಡಿಯಿರಿ.?

(21) ನೇರವಾಗಿ ಗುಣಾಕಾರ ಮಾಡದೆ 103 x 107 ರ ಗುಣಲಬ್ಧವನ್ನು ಕಂಡುಹಿಡಿಯಿರಿ.? (ಸೂಕ್ತವಾದ ನಿತ್ಯಸಮೀಕರಣ ಬಳಸಿ)

(22) $0.\overline{6}$ ಇದನ್ನು $\frac{p}{q}$ ರೂಪದಲ್ಲಿ $(p, q \in z, q \neq 0)$ ವ್ಯಕ್ತಪಡಿಸಿ.

(23) ಯೂಕ್ಲಿಡ್ ನ ಯಾವುದಾದರೂ ಮೂರು ಸ್ವಯಂಸಿದ್ಧಗಳನ್ನು ಬರೆಯಿರಿ.

(24) ಒಂದು ಕಿರಣದ ಆರಂಭಿಕ ಬಿಂದುವಿನಲ್ಲಿ $75^o$ ಕೋನವನ್ನು ರಚಿಸಿರಿ..

(25) ಅಪವರ್ತಿಸಿ .: $2x^2 + 7x + 3$

(26) $x = 1, x = -1$ ಇವುಗಳು $p(x) = x^2 - 1$ ಈ ಬಹುಪದೋಕ್ತಿಯ ಶೂನ್ಯತೆಗಳೇ ಎಂದು ಪರಿಶೀಲಿಸಿ

(27) $(x + 2y + 4z)^2$ ನ್ನು ಸೂಕ್ತವಾದ ನಿತ್ಯಸಮೀಕರಣ ಉಪಯೋಗಿಸಿ ವಿಸ್ತರಿಸಿರಿ.?

(28) ಅರ್ಥಮಾಡಿಕೊಳ್ಳಲು ಸುಲಭವಾಗುವಂತೆ , ಯೂಕ್ಲಿಡ್ ನ 5 ನೆಯ ಆಧಾರ ಪ್ರತಿಜ್ಞೆಯನ್ನು ನೀವು ಹೇಗೆ ಬದಲಾಯಿಸಿ ಬರೆಯುವಿರಿ.?

(29)ಚಿತ್ರದಲ್ಲಿ $\angle PQR = \angle PRQ$ ಆದರೆ $\angle PQS = \angle PRT$ ಎಂದು ಸಾಧಿಸಿ.?




(30) ಚಿತ್ರದಲ್ಲಿ $\triangle PQR$ ನ ಬಾಹುಗಳಾದ QP ಮತ್ತು RQ ನ್ನು ಕ್ರಮವಾಗಿ S ಮತ್ತು T ಬಿಂದುಗಳವರೆಗೆ ವೃದ್ಧಿಸಿದೆ. $\angle SPR = 135^0$ ಮತ್ತು $\angle PQT = 110^0$ ಆದರೆ $\angle PRQ$ ಕಂಡುಹಿಡಿಯಿರಿ.?




(31) ಚಿತ್ರದಲ್ಲಿ PQ ಮತ್ತು RS ರೇಖೆಗಳು T ಬಿಂದುವಿನಲ್ಲಿ ಛೇದಿಸುತ್ತವೆ. $\angle PRT = 40^0$ , $\angle RPT = 95^0$ ಮತ್ತು $\angle TSQ = 75^0$ ಆದರೆ $\angle SQT$ ಕಂಡುಹಿಡಿಯಿರಿ.?




(32-) ಚತುರ್ಭುಜ ABCD ಯಲ್ಲಿ AC =AD ಮತ್ತು AB ಯು $\angle A$ ಯನ್ನು ಅರ್ಧಿಸುತ್ತದೆ . $\triangle ABC \cong \triangle ABD$ ಎಂದು ತೋರಿಸಿ. ಹಾಗೂ BC ಮತ್ತು BD ಗಳಿಗೆ ಸಂಬಂಧಿಸಿದಂತೆ ನೀವೇನು ಹೇಳುವಿರಿ.?




(33) ABCD ಒಂದು ಚತುರ್ಭುಜ . AD = BC ಮತ್ತು $\angle DAB = \angle CBA$ ಆಗಿದೆ. (i) $\triangle ABD \cong \triangle BAC$

(ii) BD = AC ಎಂದು ಸಾಧಿಸಿ.




(34) ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸತ್ಯ ಮತ್ತು ಯಾವುದು ಸುಳ್ಳು ಎಂಬುದನ್ನು ಕಾರಣ ಸಹಿತ ತಿಳಿಸಿ.

(i) ಒಂದು ಬಿಂದುವಿನ ಮೂಲಕ ಒಂದೇ ಒಂದು ಸರಳರೇಖೆ ಹಾದುಹೋಗಬಹುದು.

(ii) ಎರಡು ಪ್ರತ್ಯೇಕ ಬಿಂದುಗಳ ಮೂಲಕ ಅಪರಿಮಿತ ರೇಖೆಗಳು ಹಾದುಹೋಗುತ್ತವೆ.

**III .** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **$3 \times 7 = 21$**

(35) $\sqrt{5}$ ನ್ನು ಸಂಖ್ಯಾರೇಖೆಯ ಮೇಲೆ ಪ್ರತಿನಿಧಿಸಿ.?

(36) ಅಪವರ್ತಿಸಿ. (a) $27Y^3 + 125Z^3$. (b) $4a^2 - 16b^2$

(37) ತಾಳೆ ನೋಡಿರಿ,. $x^3 + y^3 = (x + y)(x^2 - xy + y^2)$

(38) $BC = 7$ cm , $\angle B = 75^0$ ಮತ್ತು $AB + AC = 13$ cm ಇರುವಂತೆ ತ್ರಿಭುಜ ABC ಯನ್ನು ರಚಿಸಿ .

(39) ಯೂಕ್ಲಿಡ್ ನ ಯಾವುದಾದರೂ 3 ಆಧಾರ ಪ್ರತಿಜ್ಞೆಗಳನ್ನು ಬರೆಯಿರಿ.?

(40) ಚಿತ್ರದಲ್ಲಿ $X + Y = W + Z$ ಆದರೆ AOB ಒಂದು ಸರಳರೇಖೆ ಎಂದು ಸಾಧಿಸಿ?




(41) ABC ಒಂದು ಸಮದ್ವಿಬಾಹು ತ್ರಿಭುಜ , ಸಮಬಾಹುಗಳಾದ AC ಮತ್ತು AB ಗಳಿಗೆ ಕ್ರಮವಾಗಿ BE ಮತ್ತು CF ಎತ್ತರಗಳನ್ನು ಎಳೆದಿದೆ. ಈ ಎತ್ತರಗಳು ಸಮ ಎಂದು ತೋರಿಸಿ.?




**IV.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **$4 \times 4 = 16$**

(42) ಅನುಕ್ರಮ ವರ್ಧನೆಯನ್ನು ಉಪಯೋಗಿಸಿ , ಸಂಖ್ಯಾರೇಖೆಯ ಮೇಲೆ 3.765 ನ್ನು ದೃಶ್ಯೀಕರಿಸಿ.?

(43) ಘನಫಲ $12ky^2 + 8ky - 20k$ ವನ್ನು ಹೊಂದಿರುವ ಆಯತ ಘನದ ಉದ್ದ , ಅಗಲ ಮತ್ತು ಎತ್ತರಗಳನ್ನು ಕಂಡುಹಿಡಿದು ಬರೆಯಿರಿ.?

(44) ಒಂದು ಚತುರ್ಭುಜದ ಕೋನಗಳು 3 : 5 : 9 : 13 ಅನುಪಾತದಲ್ಲಿವೆ..ಚತುರ್ಭುಜದ ಎಲ್ಲಾ ಕೋನಗಳನ್ನು ಕಂಡುಹಿಡಿಯಿರಿ.

(45) ಚಿತ್ರದಲ್ಲಿ AB II CD , $\angle APQ = 50^0$ ಮತ್ತು $\angle PRD = 127^0$ ಆದರೆ , x ಮತ್ತು y ಗಳ ಬೆಲೆಯನ್ನು ಕಂಡುಹಿಡಿಯಿರಿ.?

